ಹೇಳಿದ್ದ. ನಾನು ಗಾಬರಿಯಿಂದ, ರಿತಿಕ್‌ನ ಮಾತನ್ನು ಯಾರಾದರು ಕೇಳಿದರೆ? ಎಂದು ಅಕ್ಕಪಕ್ಕ ನೋಡಿದ್ದೆ. ನಾನು ವಿಷಯಾಂತರ ಮಾಡುವುದು ಉಚಿತವೆಂದು ತಿಳಿದೆ. ಭ್ರಷ್ಟಾಚಾರದ ವಿಷಯವೇ ಹೀಗಿದ್ದು, ಶಿಷ್ಟ ಮನುಷ್ಯ ಸಹ ನಿಂದಿಸಲು ಆರಂಭಿಸುತ್ತಾನೆ, ರಿತಿಕ್ ಅಷ್ಟು ಸಭ್ಯನೂ ಆಗಿರಲಿಲ್ಲ. ಅವನು ರೇಗಿದಾಗ ಬೈಯ್ಗುಳಕ್ಕೆ ಇಳಿಯುತ್ತಾನೆ.

'ಒಳ್ಳೆಯ ಸೊಳ್ಳೆಪರದೆ ಸಿಕ್ತಲ್ವ' ಎಂದೆ.

'ಹೌದು, ನಿನಗಿಷ್ಟವಾದ ಬಣ್ಣದ್ದು, ನನಗೂ ಈ ಬಣ್ಣ ಇಷ್ಟ, ಗುಲಾಬಿ ಬಣ್ಣ ರೋಮಾನ್ಸ್‌ನ ಪ್ರತೀಕವಾಗಿದೆ. ನಾವು ಈ ಸೊಳ್ಳೆಪರದೆಯೊಳಗೆ ನುಗ್ಗಿ ಮನಸಾರೆ ರೋಮಾನ್ಸ್ ಮಾಡೋಣ. ನಾನು ಹೇಳಿದ್ದು ಸರಿ ತಾನೇ?' ರಿತಿಕ್ ಮೆಲ್ಲನೆ ಕೇಳಿದ.

ನಾನು ನಾಚಿದೆ. ರಿತಿಕ್ ರೋಮಾನ್ಸ್ ಬಗ್ಗೆ ಮಾತನಾಡಿದಾಗ ನನಗೆ ತುಂಬಾ ಇಷ್ಟವಾಗುತ್ತಾನೆ. ನನಗೆ ಒಮ್ಮೊಮ್ಮೆ, ಈ ಜಗತ್ತಿನಿಂದ ರೋಮಾನ್ಸ್ ಕಡಿಮೆಯಾಗುತ್ತಿದೆ ಎಂದು ಅನ್ನಿಸುತ್ತದೆ. ಈಗ ವೇಗ ಗತಿಯ ಕಾಲವಾಗಿದೆ. ಇಬ್ಬರು ವಿರುದ್ಧ ಲಿಂಗಿಗಳು ಪರಸ್ಪರ ಭೇಟಿಯಾಗಿ, ಹಾಯ್‌ಹೋಯ್ ಎನ್ನುತ್ತಾರೆ; ಹೆಚ್ಚೆಂದರೆ ಗಲ್ಲಕ್ಕೆ ಗಲ್ಲ ಸವರಿ ಸಾರ್ವಜನಿಕವಾಗಿ ಚುಂಬಿಸಿಕೊಂಡರೆ ಹಾಗೂ ಉಚಿತ ವಾತಾವರಣ ಲಭಿಸಿದರೆ, ಇಬ್ಬರು ಪರಸ್ಪರರ ಅಧರಗಳನ್ನು ಲಾಲಿಪಾಪ್‌ನಂತೆ ಚೀಪಿದರೆ... ನಂತರ ನೇರವಾಗಿ ಹಾಸಿಗೆಗೆ ಹೋದರೆ... ರೋಮಾನ್ಸ್ ಆಯಿತು. ನಂತರ ಅವನು ಅಲ್ಲಿ, ಅವಳು ಇಲ್ಲಿ. ಊಹೂಂ! ಇದು ರೋಮಾನ್ಸ್ ಅಲ್ಲ. ಒಂದು ವೇಳೆ ನೀವು ಪರಸ್ಪರರ ಬಾಹುಗಳಲ್ಲಿ, ಮಧುರ ಮಾತುಗಳೊಂದಿಗೆ ಎರಡು ಗಳಿಗೆ ಕಳೆಯದಿದ್ದರೆ, ಪರಸ್ಪರರ ಭಾವನೆಗಳನ್ನು ಅರಿತುಕೊಳ್ಳುವ ಪ್ರಯತ್ನ ಮಾಡಿದಿದ್ದರೆ, ಅದು 'ರೊಬೋಟ್'ನಂತೆ ಯಾಂತ್ರಿಕತೆಯಾಗಲಿಲ್ಲವೇ?

'ನೀನೆಲ್ಲಿ ಕಳೆದು ಹೋಗ್ತೀಯ?' ರಿತಿಕ್ ಕೇಳಿದ.

'ಎಲ್ಲೂ ಇಲ್ಲ, ನಾವಿಬ್ಬರು ರೋಮಾನ್ಸ್‌ಗೆ ಅದೆಷ್ಟು ಹೆಚ್ಚು ಮಹತ್ವವನ್ನು ಕೊಡುತ್ತೇವೆ ಎಂದು ಯೋಚಿಸುತ್ತಿದ್ದೆ; ಆದರೆ ಇಂದಿನ ಯುವಪೀಳಿಗೆ 'ಸೆಕ್ಸ್' ಮತ್ತು 'ರೋಮಾನ್ಸ್' ಇವುಗಳನ್ನು ಎರಡು ಭಾಗಗಳಲ್ಲಿ ಹಂಚಿದೆ. ಅವರು ರೋಮಾನ್ಸ್‌ನಲ್ಲಿ ಹೆಚ್ಚು ಸಮಯವನ್ನು ಕಳೆಯದೆ, ನೇರವಾಗಿ ಸೆಕ್ಸ್‌ಗೆ ಇಳಿಯುತ್ತಾರೆ' ನಾನು ಮೆಲ್ಲನೆ ಹೇಳಿದೆ.

'ಇದರಲ್ಲಿ ತಪ್ಪೇನಿದೆ? ಎಲ್ಲರಿಗೂ ಅವರವರ ವಿಧದಂತೆ ಬದುಕುವ ಅಧಿಕಾರವಿದೆ' ಎಂದ ರಿತಿಕ್.

'ಯೂ ಆರ್ ರೈಟ್! ಹಾಗಂತ ರೋಮಾನ್ಸ್ ಎಂದೊಡನೆ ಒಂದು ವಿಷಯ ನೆನಪಾಯಿತು. ಕಾಂಟ್ರಾಸೆಪ್ಟಿವ್ ಪಿಲ್ಸ್‌ಗಳು ಮುಗಿದಿವೆ, ವಾಪಸ್ ಹೋಗುವಾಗ ತಗೊಂಡು ಹೋಗೋಣ' ನಾನು ರಿತಿಕ್‌ಗೆ ನೆನಪಿಸಿದೆ.

'ಓಹ್, ನೀನು ಮೊದಲೇ ಹೇಳಬಾರದಾಗಿತ್ತ? ನಾವೀಗ ಹತ್ತಾರು ಬಾರಿ ಮೆಡಿಕಲ್ ಸ್ಟೋರ್ಸ್ ಎದುರಿನಿಂದಲೇ ಹಾದು ಬಂದಿದ್ದೆವು. ಸರಿ, ಈಗ್ಲೆ ತೆಗೆದುಕೊಳ್ಳೋಣ'

'ರಿತಿಕ್'

'ಹೂಂ'

'ನೀನು ಸಹ ನಿನಗಾಗಿ ಏನಾದರು ತಗೋ, ಪ್ಲೀಸ್, ಫಾರ್ ಚೇಂಜ್...'

'ಏನು? ಏನು ತೆಗೆದುಕೊಳ್ಳಲಿ?' ರಿತಿಕ್ ತುಂಟತನದಿಂದ ನಕ್ಕ.

'ಅದೇ'

'ಏನು?'

'ಓಹೋ, ಗೊತ್ತಿದ್ದೂ ಗೊತ್ತಿಲ್ಲದವರ ಹಾಗೆ ಮಾಡ್ಬೇಡ', ನಾನು ಕೃತ್ರಿಮ ಲಜ್ಜೆಯೊಂದಿಗೆ ಹೇಳಿದೆ.

'ನೀನು ಹೇಳದಿದ್ದರೆ, ನೀನು ಯಾವುದರ ಬಗ್ಗೆ ಹೇಳ್ತಿದ್ದೀಯ ಅಂತ ನನಗೆಲ್ಲಿ ಅರ್ಥವಾಗುತ್ತೆ?' ರಿತಿಕ್‌ಗೆ ಚುಡಾಯಿಸುವುದರಲ್ಲಿ ಖುಷಿಯಾಗುತ್ತಿತ್ತು.

'ಸರಿ, ತಗೋಬೇಡ, ಹಾಗಂತ ನೀನ್ಯಾವಾಗ ತಗೊಳ್ತೀಯ', ನಾನು ಕೃತ್ರಿಮ ಕ್ರೋಧವನ್ನು ವ್ಯಕ್ತಪಡಿಸಿದೆ. ನನ್ನ ಸಿಟ್ಟು ನಿಜವಲ್ಲ ಎಂಬುದು ರಿತಿಕ್‌ಗೆ ಸಹ ತಿಳಿದಿತ್ತು.

'ಅಯ್ಯೋ ದೇವರೇ! ಈ ದೇಶದ ಮಹಿಳೆ ತನ್ನ ಬಾಯಿಯಿಂದ ಕಾಂಡೋಮ್ ಉಚ್ಚಾರಣೆ ಮಾಡುವುದನ್ನು ಯಾವಾಗ ಕಲಿಯುತ್ತಾಳೆ?' ರಿತಿಕ್ ಮೆಲ್ಲನೆ ತನ್ನ ತಲೆಗೆ ಹೊಡೆದುಕೊಳ್ಳುತ್ತಾ ನಕ್ಕ. ನಾನು ಸಹ ನಕ್ಕೆ.

'ಓಕೆ, ನೀನಿವತ್ತು ಕಾಂಡೋಮ್ ತಗೊಳ್ತೀದ್ದೀಯೋ, ಇಲ್ವೋ?'

'ಇದಪ್ಪಾ! ನೀನೀಗ ದಾದಾಗಿರಿಯಿಂದ ಹೇಳ್ತಿದ್ದೀಯ, ಹೀಗಾಗಿ ತೆಗೆದುಕೊಳ್ಳಲೇ ಬೇಕಾಗುತ್ತೆ, ಕಡೆಗೆ ನೀನು ನೋ ಎಂಟ್ರಿ ಎಂದರೆ?' ರಿತಿಕ್ ನಕ್ಕ.

'ಥತ್' ನಾನು ಮತ್ತೆ ನಾಚಿದೆ.

ನಾವು ಊಟವನ್ನು ಮುಗಿಸಿದೆವು. ರಿತಿಕ್ ಬಿಲ್ ಚುಕ್ತಾ ಮಾಡಿದ. ನಾವು ಮನೆಗೆ ಮರಳಿ ಬರುವಾಗ ಒಂದು ಮೆಡಿಕಲ್ ಸ್ಟೋರ್ ಬಳಿ ನಿಂತೆವು. ನಾನು ಬೈಕ್ ಬಳಿಯೇ ನಿಂತಿದ್ದೆ, ರಿತಿಕ್ ಒಬ್ಬನೇ ಮೆಡಿಕಲ್ ಸ್ಟೋರ್‌ಗೆ ಹೋದ. ಅಂದು ರಾತ್ರಿ ನಾವು ಹೊಸ ಸೊಳ್ಳೆಪರದೆಯನ್ನು ಹಾಕಿ, ಅದರೊಳಗೆ ಮನಸಾರೆ ಸುಖಪಟ್ಟೆವು. ಅಂದು ನಾನು ಹೇಳಿದ್ದಕ್ಕಾಗಿ ರಿತಿಕ್ ಕಾಂಡೋಮ್ ಧರಿಸಿದ. ಆದರೆ ನಡುವೆಯೇ ಅದನ್ನು ಕಿತ್ತೆಸೆದ.

'ನನಗೆ ಇದರಲ್ಲಿ ಮಜವಾಗಲ್ಲ, ನಾನು ನೇರವಾಗಿ ಸ್ಪರ್ಶಿಸಲು ಬಯಸ್ತೇನೆ. ನಿನ್ನ ಆ ಪಿಲ್ಸ್ ಎಲ್ಲಿದೆ? ಅದನ್ನು ಹಾಕ್ಕೋ', ರಿತಿಕ್ ಎಂದಿನಂತೆ ನನ್ನನ್ನು ವಿವಶಗೊಳಿಸಿದ; ನನಗೆ ಗರ್ಭ ಧರಿಸುವುದು ಇಷ್ಟವಿಲ್ಲದಿದ್ದರೆ, ನಾನೇ ನನ್ನ ಸುರಕ್ಷತೆಯನ್ನು ನೋಡಿಕೊಳ್ಳಬೇಕಾಗುವುದು.

ಈ ವಿಷಯದ ಬಗ್ಗೆ ಯೋಚಿಸಿ ಒಮ್ಮೊಮ್ಮೆ ನನ್ನ ಮನಸ್ಸು ಬೇಸರಗೊಳ್ಳುತ್ತಿತ್ತು. ಇದನ್ನು 'ಸಂಭೋಗ' ಎನ್ನುತ್ತೇವಲ್ಲ? ಅಂದರೆ ಇಬ್ಬರು ಸಮಾನವಾಗಿ ಪರಸ್ಪರ ಒಬ್ಬರನ್ನೊಬ್ಬರು ಅನುಭವಿಸುವುದು. ಆದರೆ ಗರ್ಭನಿರೋಧಕದ ಪ್ರಶ್ನೆ ಬಂದಾಗ ಸಮಾನತೆ ಎಲ್ಲಿಗೆ ಹೋಗುತ್ತದೆ? ಪ್ರಕೃತಿ ಹೆಣ್ಣಿಗೆ ಗರ್ಭಧಾರಣೆಯ ಸಾಮರ್ಥ್ಯವನ್ನು ಕೊಟ್ಟಿರುವಾಗ, ಅವಳೇ ಗರ್ಭ ನಿಲ್ಲದ ಬಗ್ಗೆ ಯೋಚಿಸಬೇಕು, ಇದು ಸಂಭೋಗವಾಗಲಿಲ್ಲವಲ್ಲ!

ರಿತಿಕ್ ಮೊದಲ ಬಾರಿಗೆ ನನ್ನ ಮಾತನ್ನು ಒಪ್ಪಿದ್ದ. ಎರಡನೆಯ ಬಾರಿ, ಮೂರನೆಯ ಬಾರಿ, ನಂತರ ಅದೆಷ್ಟು ಬಾರಿ ಅವನು ನನ್ನನ್ನು ಕಾಂಟ್ರಸೆಪ್ಟಿವ್ ಆಸರೆಗೆ ಬಿಟ್ಟಿದ್ದ ಎಂಬುದು ನನಗೆ ಸರಿಯಾಗಿ ನೆನಪಿಲ್ಲ. ಅದೇಕೋ ಏನೋ ನಾನು ಸಹ ನೆಪ ಹೇಳದೆ ಇದನ್ನು ಒಪ್ಪಿಕೊಂಡೆ. ಹೆಣ್ಣು ಪುರುಷನಿಗೆ ಕ್ರಮೇಣ ಅಪರಿಮಿತ ಸ್ವಾತಂತ್ರ್ಯವನ್ನು ಕೊಡುವುದು ಅವಳ ದೋಷವಾಗಿದೆ. ನಾನು ಸಹ ರಿತಿಕ್‌ಗೆ ಸ್ವಾತಂತ್ರ್ಯವನ್ನು ಕೊಟ್ಟಿದ್ದೆ. ಈ ಸ್ವಾತಂತ್ರ್ಯದ ಲಾಭ ಪಡೆದ ರಿತಿಕ್ ಸಮಾನತೆಯ ಪಾಠವನ್ನು ಮರೆತ. ಅವನು ಹೆಣ್ಣಿನ ದೇಹದ ಮೇಲೆ ಪುರುಷನ ವರ್ಚಸ್ಸಿನ ಪಾಠವನ್ನು ಪುನರುಚ್ಚಿಸುತ್ತಾ ಹೋದ.

ಅದೊಂದು ದಿನ ನಾನು ಧೈರ್ಯವಹಿಸಿ ಕೀರ್ತಿಯನ್ನು ಕೇಳಿದೆ, 'ಕಾಂಟ್ರಸೆಪ್ಟಿವ್ ಪಿಲ್ಸ್‌ಗಳನ್ನು ಹೆಚ್ಚು ಉಪಯೋಗಿಸುವುದರಿಂದ ತೊಂದರೆಯಾಗುವುದಿಲ್ಲ ತಾನೇ?'

'ನೀನು ಅವುಗಳನ್ನು ಯಾವುದಕ್ಕೆ ಉಪಯೋಗಿಸುತ್ತೀಯ? ತಿನ್ನುವುದಕ್ಕೋ ಅಥವಾ ಹಾಕಿಕೊಳ್ಳುವುದಕ್ಕೋ?' ಕೀರ್ತಿ ಹಿಂಜರಿಕೆಯಿಲ್ಲದೆ ಕೇಳಿದಳು.

'ಎರಡಕ್ಕೂ, ಅಂದರೆ ಒಮ್ಮೆ ತಿನ್ನಲು, ಇನ್ನೊಮ್ಮೆ...' ನಾನು ಮುಂದಕ್ಕೆ ಹೇಳಲು ಹಿಂಜರಿದೆ.

ಇದು ಇಬ್ಬರು ಗೆಳತಿಯರ ನಡುವಿನ ಒಂದು ಸಾಮಾನ್ಯ ಚರ್ಚೆಯಾಗಬಹುದಿತ್ತು. ಆದರೆ ನನಗೆ ಇಂಥ ವಿಷಯಗಳ ಬಗ್ಗೆ ಮಾತನಾಡುವಾಗ ಸದಾ ಸಂಕೋಚ ಮತ್ತು ಗಾಬರಿಯಾಗುತ್ತದೆ. ಆಗ ಬಹುಶಃ ನನ್ನ ರಕ್ತದೊತ್ತಡ ಸಹ ಹೆಚ್ಚುತ್ತದೆ. ನಾನು ಅಮ್ಮನನ್ನು, ನೀವು ಯಾವ ಉಪಾಯವನ್ನು ಮಾಡುತ್ತೀರ ಎಂದು ಕೇಳಬೇಕಿತ್ತು. ಅಥವಾ ಅವರೇ ನನಗೆ ಈ ಬಗ್ಗೆ ಹೇಳಬೇಕಿತ್ತು. ಆದರೆ ಯಾವುದೂ ಆಗಲಿಲ್ಲ. ನಾನು ನನ್ನ ಹೆಣ್ತನದ ಪ್ರತಿಯೊಂದು ವಿಷಯವನ್ನು ತಿಳಿಯಲು ನನ್ನ ಗೆಳತಿಯರನ್ನು ಅವಲಂಬಿಸುತ್ತಿದ್ದೆ. ರೀತಾ ಕಾಲೇಜು ಜೀವನದಲ್ಲಿ ನನಗೆ ಲೈಂಗಿಕಜೀವನದ ಸಂಪೂರ್ಣ ಜ್ಞಾನವುಳ್ಳ ಪುಸ್ತಕವನ್ನು ತೋರಿಸಿದ್ದಳು, ಇದಕ್ಕೆ ಮೊದಲು ನೂತನ್ ಸೋದರತ್ತೆಯವರು, ನನ್ನ ಗೆಳತಿಯಾಗಿರದಿದ್ದರೂ, ನನಗೆ ನನ್ನ ಶರೀರದ ಭೂಗೋಳದ ಬಗ್ಗೆ ಎಚ್ಚರಿಸಿದ್ದರು. ಈಗ ನಾನು ಕೀರ್ತಿಯ ಮಾತುಗಳನ್ನು ಕೇಳಿ ಕಲಿಯುತ್ತಿರುತ್ತೇನೆ.

